<u>ಸಾಕ್ಷಿಗೆ ದಿನಾಂಕ *07-01-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀಸವಾಲು : *4* ರಿಂದ *8* ನೇ ಪ್ರತಿವಾದಿಯರ ಪರ ಶ್ರೀ ವಿ ಬಿ ಡಿ. ವಕೀಲರಿಂದ:</u>

ಗಂಗವ್ವ ಮತ್ತು ಚನ್ನಪ್ಪ ರವರು ಸರ್ವೆ ನಂ. 317/1 ಮತ್ತು 317/2 ನ್ನು ಎನ್.ಎ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳಲ್ಲಿ ನಿವೇಶನಗಳನ್ನು ಮಾಡುವ ಸಲುವಾಗಿ ಗುಡ್ಡಕಲ್ಲು ಭೂಮಿಗಳನ್ನು ಸಮತಟ್ಟಾಗಿ ಗಂಗವ್ವ ಮತ್ತು ಚನ್ನಪ್ಪ ರವರು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಜಮೀನುಗಳಲ್ಲಿ ಎನ್.ಎ ಮಾಡಿದ ನಂತರ ಅವುಗಳ ಅಭಿವೃದ್ದಿಗೊಸ್ಕರ ಗಂಗವ್ವ ಮತ್ತು ಚನ್ನಪ್ಪ ಮತ್ತು ಅವರ ಮಕ್ಕಳು ಇಲ್ಲಿಯವರೆಗೂ 95 ಲಕ್ಷ ರೂ.ಗಳನ್ನು ಖರ್ಚು ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನನಗೆ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯವು ಅಮೀನಗಡದ ಸಮಸ್ತ ನಾಗರೀಕರಿಗೆ ತಿಳಿದಿತ್ತು ಎಂದರೆ ಸಾಕ್ಷಿದಾರರು ನನಗೆ ಅವರು ಹೇಳಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ವಿಷಯವು ನನ್ನ ಸಹೋದರ ಈರಣ್ಣ ಮತ್ತು ನನ್ನ ತಾಯಿಗೆ ತಿಳಿದಿತ್ತು ಎಂದರೆ ಸಾಕ್ಷಿದಾರರು ಅವರಿಗೂ ಕೂಡ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ. ಚನ್ನಬಸಪ್ಪ,ಈರಣ್ಣ, ಈರಪ್ಪ ರವರ ನಡುವೆ ಅಪಸಾತ ವಾಟ್ನಿ 1994, 1995, 1997, 2008 ಮತ್ತು 2016 ರಲ್ಲಿ ಆದ ವ್ಯವಹರಣೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ನನ್ನ ವಾದ ಪತ್ರದಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ನನ್ನ ತಂದೆಗೆ ಬರುವ ಭಾಗದಲ್ಲಿ ನನಗೆ ಆಸ್ತಿ ಕೊಡಿಸಿ ಎಂದು ಮಾಗಣಿ ಮಾಡಿರುತ್ತೇನೆ. ನಾನು ಆಸ್ತಿಯ ಕುರಿತು ಪಾಲು ಬೇಕೆಂದು ಮಾತ್ರ ಮಾಗಣಿ ಮಾಡಿರುತ್ತೇನೆ. ಪಾಲು ಬೇಕೆಂದು ಮಾಡಿರುವುದು ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ತುಳಸಿಗೇರಿ ಗ್ರಾಮದ ಡ ನಂ. 4086, ಅಮೀನಗಡ ಗ್ರಾಮದ ಡ ನಂ. 1928, ಎಮ್.ಆರ್.ನಂ-57, ಎಮ್.ಆರ್.ಹೆಚ್-9, ಎಮ್.ಆರ್.ನಂ.ಹೆಚ್-52, ಎಮ್.ಆರ್.ನಂ.ಟಿ-94 ಮತ್ತು 95 ಇವು ನಮ್ಮ ಮೇಲೆ ಬಂಧನಕಾರಿ ಆಗಿರುತ್ತವೆ ಎಂದರೆ ಸರಿಯಲ್ಲ. ಅಮೀನಗಡ ಗ್ರಾಮದ ಪ್ಲಾಟ ನಂ.11 ಇದು ಮಾರಾಟ ಮಾಡಿರುವುದು ಇದು ನಮ್ಮ ಮೇಲೆ ಬಂಧನಕಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ತುಳಸಿಗೇರಿ ಗ್ರಾಮದ ಡ ನಂ. 4086 ಮತ್ತು ಅಮೀನಗಡ ಗ್ರಾಮದ ಡ ನಂ. 1928 ಈ ಎರಡೂ ಆದೇಶಗಳಲ್ಲಿ ನಾನು ಎಲ್ಲಿಯೂ ಪ್ರಶ್ನೆ ಮಾಡಿರುವುದಿಲ್ಲ. ಡ ನಂ.4086 ಮತ್ತು 1928 ರಚನೆಯಾಗಿ 27 ವರ್ಷಗಳಾಗಿದ್ದು ಅವುಗಳನ್ನು ಈಗ ಪ್ರಶ್ನೆ ಮಾಡಲು ಬರುವುದಿಲ್ಲ ಮತ್ತು ಕಾನೂನಿನ ತೊಡಕು

ಬರುತ್ತದೆ ಎಂದರೆ ಸರಿಯಲ್ಲ. ನಾನು, ನನ್ನ ತಾಯಿ ಮತ್ತು ನನ್ನ ಅಣ್ಣ ಮಾತನಾಡುತ್ತೇವೆ ಎಂದರೆ ಸಾಕ್ಷಿದಾರರು ಒಳ್ಳೆಯದು ಕೆಟ್ಟದ್ದು ಬಂದಾಗ ಸೇರುತ್ತೇವೆ ಮತ್ತು ಮಾತನಾಡುತ್ತೇವೆ ಎಂದು ಹೇಳುತ್ತಾರೆ. ನಾನು ನನ್ನ ತಾಯಿ ಮತ್ತು ಅಣ್ಣನ ಜೊತೆ ಕೂಡಿ 4 ರಿಂದ 6 ನೇ ಪ್ರತಿವಾದಿಯರ ಹೆಸರಿಗೆ ಇದ್ದ ಆಸ್ತಿಗಳನ್ನು ಅಕ್ರಮವಾಗಿ ಪಡೆಯಬೇಕೆಂಬ ಉದ್ದೇಶದಿಂದ ಸಂಗನಮತ ಮಾಡಿಕೊಂಡು ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ನನ್ನ ಅಣ್ಣನ ಹೆಸರಿನಲ್ಲಿ ಇದ್ದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ ತಾಯಿಯ ಹೆಸರಿನಲ್ಲಿ ಆಸ್ತಿ ಇರುವುದಿಲ್ಲ ಮತ್ತು ನನ್ನ ಅಣ್ಣನ ಹೆಸರಿನಲ್ಲಿ ಆಸ್ತಿ ಇರುತ್ತದೆ ಮತ್ತು ನಮ್ಮ ವಕೀಲರಿಗೆ ಸದರಿ ದಾಖಲೆಗಳನ್ನು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ನಮ್ಮ ತಾಯಿಯ ಹೆಸರಿನಲ್ಲಿ ಅಮೀನಗಡದಲ್ಲಿ ಆಸ್ತಿ ನಂ.48 ಮೊದಲು ಇದ್ದು, ಈಗ ನನ್ನ ತಾಯಿಯ ಹೆಸರಿನಲ್ಲಿ ಇರುವುದಿಲ್ಲ. ವಿಜಯಪೂರದಲ್ಲಿ ನನ್ನ ಅಣ್ಣನ ಹೆಸರಿನಲ್ಲಿ ಆಸ್ತಿ ಇರುತ್ತದೆ ಎಂದರೆ ಸಾಕ್ಷಿದಾರರು ಅದನ್ನು ನನ್ನ ಅಣ್ಣ ಮಾಡಿಕೊಂಡಿರುತ್ತಾನೆ ಎಂದು ಹೇಳುತ್ತಾರೆ. ನನ್ನ ಅಣ್ಣ ಸದರಿ ಆಸ್ತಿಯನ್ನು ಹೇಗೆ ತೆಗೆದುಕೊಂಡಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ವಿಜಯಪೂರದಲ್ಲಿರುವ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಲಾರದೇ ಸದರಿ ದಾವೆಯು ನಡೆಯುವುದಿಲ್ಲ ಎಂದರೆ ಸಾಕ್ಷಿದಾರರು ವಿಜಯಪೂರದಲ್ಲಿರುವ ಆಸ್ತಿಯು ನನ್ನ ಅಣ್ಣನ ಸ್ವಂತ ಆಸ್ತಿ ಎಂದು ಹೇಳುತ್ತಾರೆ. ಶೆಡ್ಯೂಲ್-ಬ ದಲ್ಲಿರುವ ನಿವೇಶನಗಳ ವಿವರಣೆ ತಪ್ಪು ಇರುತ್ತದೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಮಾಹಿತಿ ಇರುವುದಿಲ್ಲ ಮತ್ತು 4 ರಿಂದ 8 ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ನನ್ನ ಅಣ್ಣನ ಮಾತು ಕೇಳಿಕೊಂಡು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು : *10* ರಿಂದ *12* ನೇ ಪ್ರತಿವಾದಿಯರ ಪರ ಶ್ರೀ ಎಮ್.ವಿ.ಎ. ವಕೀಲರಿಂದ:**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ನಾನು ಹಾಜರು ಪಡಿಸಿರುವ ವಂಶಾವಳಿಯು ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ರುದ್ರಪ್ಪ ನನ್ನ ಅಜ್ಜ. ನೀಲಮ್ಮ ನನ್ನ ಅಜ್ಜಿ. ಅವರಿಗೆ ಮೂರು ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು. ಅವರೆಂದರೆ, ಚನ್ನಬಸಪ್ಪ, ಈರಪ್ಪ, ಚನ್ನಪ್ಪ ಮತ್ತು ಶಂಕ್ರಮ್ಮ. ಶಂಕ್ರಮ್ಮ ರವರನ್ನು ವಂಶಾವಳಿಯಲ್ಲಿ ತೋರಿಸಿರುವುದಿಲ್ಲ. ಶಂಕ್ರಮ್ಮರವರನ್ನು ಈ ದಾವೆಯಲ್ಲಿ ಸೇರಿಸದೇ ಈ ದಾವೆಯು ನಡೆಯುವುದಿಲ್ಲ

ಎಂದರೆ ಸರಿಯಲ್ಲ. ನಾನು ಚನ್ನಬಸಪ್ಪ ರವರ ಮಗಳು. *1996-97* ರಲ್ಲಿ ದಾವಾ ಆಸ್ತಿಗಳಲ್ಲಿ ಪಾಲು ವಾಟ್ನಿ ಆಗಿರುತ್ತದೆ ಎಂದರೆ ಸರಿಯಲ್ಲ. ಪಾಲು ವಾಟ್ನಿ ಆದ ನಂತರ ಅವರಿಗೆ ಬಂದಂತಹ ಆಸ್ತಿಗಳನ್ನು ಅವರು ತಮ್ಮ ಪ್ರಪಂಚದ ಅಡಚಣೆಗೋಸ್ಕರ ಕೆಲವು ಜನರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾರಾಟ ಮಾಡಿರಬಹುದು, ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಅಮೀನಗಡದ ಆಸ್ತಿಗಳಾದ ಸರ್ವೆ ನಂ.*317/1* ಕ್ಷೇತ್ರ *3* ಎಕರೆ *8* ಗುಂಟೆ ಮತ್ತು ಸರ್ವೆ ನಂ. *317/2* ಕ್ಷೇತ್ರ *3* ಎಕರೆ *8* ಗುಂಟೆ ಇವು ಪಿತ್ರಾರ್ಜಿತ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಈ ಆಸ್ತಿಗಳಲ್ಲಿ ಪಾಲುವಾಟ್ನಿ ಆದ ನಂತರ ಡ ನಂ.*1928* ರಚೆನೆಯಾಗಿದ್ದು ಅದು ನನ್ನ ಮೇಲೆ ಬಂಧನಕಾರಿ ಆಗಿರುತ್ತದೆ ಎಂದರೆ ಸಾಕ್ಷಿದಾರರು ಪಾಲು ವಾಟ್ನಿ ಅಗಿರುವುದಿಲ್ಲ ಎಂದು ಹೇಳುತ್ತಾರೆ. ಆಸ್ತಿ ನಂ. *11* ಮತ್ತು *14* ಈ ಎರಡೂ ಆಸ್ತಿಗಳನ್ನು ರುದ್ರಪ್ಪ ರವರು ಈರಪ್ಪ ಚಿತ್ತರಗಿ ಇವರಿಂದ ಖರೀದಿ ಹಿಡಿದ ಆಸ್ತಿಗಳು ಎಂದರೆ ಸಾಕ್ಷಿದಾರರು ಅವು ನನ್ನ ಅಜ್ಜನ ಆಸ್ತಿಗಳು ಎಂದು ಹೇಳುತ್ತಾರೆ . ರುದ್ರಪ್ಪ ರವರು ಖರೀದಿ ಹಿಡಿದಿರುವ ಬಗ್ಗೆ ದಿನಾಂಕ *13-12-1976* ರಂದು ಖರೀದಿ ಪತ್ರ ಆಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈ ಕುರಿತು ಡ ನಂ.*1928* ದಿನಾಂಕ *11-10-1995* ರಂದು ರಚನೆ ಆಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ನಿವೇಶನ *11* ಮತ್ತು *14* ಈ ಎರಡೂ ಆಸ್ತಿಗಳು ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ರುದ್ರಪ್ಪ ರವರು ತೀರಿಕೊಳ್ಳುವ ಮೊದಲು ತಮ್ಮ ಮೂರು ಜನ ಮಕ್ಕಳಿಗೆ ನಿವೇಶನ *11* ಮತ್ತು *14* ನ್ನು ಹಂಚಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಪ್ಲಾಟ ನಂ.*11* ಕ್ಷೇತ್ರ *20*40* ಇದು ಈರಪ್ಪ ರುದ್ರಪ್ಪ ಗೋಕಾವಿ ಯವರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಈರಪ್ಪ ತೀರಿಕೊಂಡ ನಂತರ ಅವರ ಹೆಂಡತಿಯ ಹೆಸರಿನಲ್ಲಿ ವಾರಸಾ ಆಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಪ್ಲಾಟ ನಂ. *11* ಎ ಕ್ಷೇತ್ರ *20*40* ಇದು ಈರಣ್ಣ ತಂದೆ ಚನ್ನಬಸಪ್ಪ ರವರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಪ್ಲಾಟ ನಂ. *14* ಕ್ಷೇತ್ರ *20*40* ಇದನ್ನು ಚನ್ನಪ್ಪ ರವರಿಗೆ ಕೊಟ್ಟಿದ್ದು ಅವರು ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ ವಾರಸಾ ಆಗಿರುತ್ತದೆ ಎಂದರೆ ಸಾಕ್ಷಿದಾರರು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. *4* ನೇ ಪ್ರತಿವಾದಿಯು ಪ್ಲಾಟ ನಂ.*11* ಕ್ಷೇತ್ರ *20*40* ಇದಕ್ಕೆ ಕಾಯ್ದೆ ಬದ್ದ ಮಾಲೀಕಳು ಮತ್ತು ಕಬ್ಜಾದಾರಳು ಎಂದರೆ ಸಾಕ್ಷಿದಾರರು ಇರಬಹುದು ಎಂದು ಹೇಳುತ್ತಾರೆ. *4* ನೇ

ಪ್ರತಿವಾದಿಯು ತನ್ನ ಪ್ರಪಂಚದ ಅಡಚಣೆ ಸಲುವಾಗಿ ದಿನಾಂಕ *10-07-2020* ರಂದು *4* ಲಕ್ಷ *90* ಸಾವಿರ ರೂ.ಗಳಿಗೆ *10* ಮತ್ತು *11* ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ಮಾರಾಟ ಮಾಡಿರಬಹುದು ಎಂದು ಹೇಳುತ್ತಾರೆ. ನಂತರ *10* ಮತ್ತು *11* ನೇ ಪ್ರತಿವಾದಿಯರ ಹೆಸರಿನಲ್ಲಿ ಉತಾರೆ ಬಂದಿದ್ದು ಈಗಲೂ ಕೂಡ ಅವರ ಹೆಸರುಗಳು ಉತಾರೆಯಲ್ಲಿ ಇರುತ್ತವೆ ಎಂದರೆ ಸರಿ. ಪ್ಲಾಟ ನಂ.*11* ರ ಚಕಬಂದಿ ಸರಿಯಾಗಿ ಗೊತ್ತಿರುವುದಿಲ್ಲ. *10* ಮತ್ತು *11* ನೇ ಪ್ರತಿವಾದಿಯರು ಪ್ಲಾಟ ನಂ.*11* ನ್ನು ಖರೀದಿ ತೆಗೆದುಕೊಂಡ ನಂತರ ಅವರ ಹೆಸರುಗಳು ಕಾಯ್ದೇಬದ್ದವಾಗಿ ಉತಾರೆಯಲ್ಲಿ ಬಂದಿದ್ದು ಈಗಲೂ ಕೂಡ ಅವರು ಸದರಿ ಆಸ್ತಿಯ ಉಪಭೋಗವನ್ನು ಮಾಡುತ್ತಿದ್ದಾರೆ ಎಂದರೆ ಸರಿ. ಪ್ಲಾಟ ನಂ.*11* ಇದು ಖರೀದಿ ಹಿಡಿದ ಆಸ್ತಿ ಆಗಿದ್ದು ಅದರಲ್ಲಿ ನನಗೆ ಯಾವುದೇ ಪಾಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ತಿಯಲ್ಲಿ ಪಾಲು ಪಡೆಯ ಬೇಕೆನ್ನುವ ಉದ್ದೇಶದಿಂದ *10* ರಿಂದ *12* ನೇ ಪ್ರತಿವಾದಿಯ ಮೇಲೆ ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. *10* ಮತ್ತು *11* ನೇ ಪ್ರತಿವಾದಿಯರು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದು ಸುಳ್ಳು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : *9* ನೇ ಪ್ರತಿವಾದಿಯರ ಪರ ವಕೀಲರು ಸಮಯ ಕೋರಿರುತ್ತಾರೆ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.